DC-349
T.P.51 2

51st Year of Publication ★ SATYAVADI Daily, MYSORE 4

Reg No B G 155 7-8-1966

ಪ ನು ು ರ ್ಣ ಮೂನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಅನಂತಶಿಷ್ಟೀವಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನೆರೆಹಾವಳಿ ಕುರಿತು ಪಾ. ನಹಸ್ಯರ ಆತಂಕ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಅಪೆರಾ ಟಾಕೀಸಿನವರು, ಪದ್ಮಭೂಷಣ ನೇ ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿ ರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವಂದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಗಾಂಧಿ ರೈಲುಗಳು

ಮುಂದಿನ ವರ್ಷ ಎರಡು ಗಾಂಧಿ ಶತ ಮಾನೋತ್ಸವ ರೈಲುಗಳು (ಒಂದು ಬ್ರಾಡ್ ಗೇಜ್ ಮತ್ತೊಂದು ಮೀಟರ್) ದೇಶದಲ್ಲಿ ಪ್ರವಾಸ ಮಾಡುವುದು. ಇವು ಗಾಂಧೀಜಿ ಜೀವಿತ ಮತ್ತು ಬೋಧನೆಯ ಸಂಚಾರಿ ಪ್ರದರ್ಶನಗಳಾಗಿರುವುವು.

ಶೋಧನೆ

1707 ನೇ ಅಕ್ಟೋಬರು 22 ರಂದು ಸಿಸಿಲಿ ದ್ವೀಪಗಳಾಚೆ ಚಂಡ ಮಾರುತ ದಿಂದ ಒಂದುತಂಡ ಬ್ರಿಟಿಷ್ ಹಡಗುಗಳು ಮುಳುಗಿಹೋದವು. ಎರಡು ಸಾವಿರ ಮಂದಿ ನೀರುಪಾಲಾದರು. ಹಡಗುಗಳಲ್ಲಿ ಒಂದು ಮಿಲಿಯಕ್ಕೂ ಹೆಚ್ಚು ಚಿನ್ನ, ಬೆಳ್ಳಿಯ ಸ್ಟರ್ಲಿಂಗುಗಳಿದ್ದವು. ಈಗ 260 ವರ್ಷಗಳ ನಂತರ ಅಲ್ಲಿ ನೀರಿನಲ್ಲಿ ಮುಳುಗಿದವರು ಒಂದು ಮೂಳೆಯನ್ನು ತೆಗೆದರು. ಅದಕ್ಕೆಲ್ಲ ಬೆಳ್ಳಿ ನಾಣ್ಯ ಅಂಟಿಸಿದೆ. ಮುಳುಗಿರುವ ನಿಧಿ ಎತ್ತಲು ಇನ್ನು ಪ್ರಯತ್ನ ಆಗಬೇಕಂದು.

★

ಫ್ರಂಟ್‌ಗೆ ಕೇಬಲ್

ತಮ್ಮ ತಂದೆಯು ಸಿಂಹಳಕ್ಕೆ ಭೇಟಿ ಕೊಡುವುದಾದರೆ ತಾನು ಆಗ ಬರುವುದಾಗಿ ಇಸ್ಲಾಮಿಕ್ ಸೋಷಲಿಸ್ಟ್ ಫ್ರಂಟ್‌ನ ಷೇಕ್ ಲಬ್ದುಲ್ಲರ ಮಗ ಲಂಡನ್ನಿನಲ್ಲಿರುವ ಟಾರಿಷ್ ಅಬ್ದುಲ್ಲಾ ಫ್ರಂಟ್‌ಗೆ ಕೇಬಲ್ ಮಾಡಿದ್ದಾರೆ.

★

ಷೋ ಕಾಸ್ ನೋಟೀಸ್

ಷೇಕ್ ಮುಜುಬರ್ ರಹಮಾನ್ ಮತ್ತಿತರರನ್ನು ಪಿತೂರಿಗಾಗಿ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಮಂಡಲಿಯನ್ನು ಯಾಕೆ ನ್ಯಾಯಬಾಹಿರವೆಂದು ಸಾರಬಾರದೆಂದು ಕೋರಿಸಲು ಪಾಕೀಸ್ತಾನ ಸರಕಾರಕ್ಕೆ ಹೈಕೋರ್ಟ್ ಷೋಕಾಸ್ ನೋಟೀಸ್ ಕೊಟ್ಟಿದೆ ಎಂದು ಢಾಕ್ಕಾ ವಾರ್ತೆ.

★ ಮುಂದಿನ ವರ್ಷ ಗಾಂಧಿಶತಮಾನೋತ್ಸವಕ್ಕೆ ಮುಂಚೆ 2 ಕೋಟಿ ಗಿಡಗಳನ್ನು ನೆಡಲು ರಾಜ್ಯದ ಅರಣ್ಯ ಇಲಾಖೆ ಏರ್ಪಡಿಸುತ್ತಿದೆಯೆಂದು ಧಾರವಾಡದಿಂದ ಬಂದ ವಾರ್ತೆ ತಿಳಿಸುತ್ತದೆ.

ನಿರಾಶ್ರಿತರಿಗೆ ವಸತಿ

ಕಾಯುಚೂರಿನ ಸಿಂಧನೂರಿನ ತಾಲ್ಲೂಕಿನಲ್ಲಿ ಪೂರ್ವ ಪಾಕೀಸ್ತಾನದಿಂದ ಬಂದ ಒಂಬೈನೂರು ವ್ಯವಸಾಯ ಸಂಸಾರಗಳು ಸಂಸಾರಗಳು ಮತ್ತು ತೊಂಬತ್ತು ವ್ಯವಸಾಯೇತರ ಸಂಸಾರಗಳು ನೆಲಸಲು ಭಾರತ ಸರ್ಕಾರ ಒಪ್ಪಿದೆ.

★

ಪಾಕ್ ಪ್ರಯತ್ನ

ಪಾಕೀಸ್ತಾನವು ರಕ್ಷಣಾ ಸಮಿತಿಯಲ್ಲಿ ಸೆಪ್ಟೆಂಬರಿನಲ್ಲಿ ಕಾಶ್ಮೀರ ವಿಚಾರವನ್ನು ಎತ್ತುವಂತಿಡೆಯೆಂದೂ, ಪ್ರಬಲ ತ್ರಿದೇಶಗಳ ನೆರವಿಗೆ ಪ್ರೇರೇಪಿಸುತ್ತಿಡೆಯೆಂದೂ ಹೇಳಲಾಗಿದೆ.

●

ಆಕ್ರಮ ಸಾಗಾಣಿಕೆ ಅಕ್ಕಿ ಜಪ್ತಿ

ಕೇರಳಕ್ಕೆ ಆಕ್ರಮವಾಗಿ 92 ಮೂಟೆಗಳಷ್ಟು ಅಕ್ಕಿ ಸಾಗಿಸುತ್ತಿದ್ದ ಲಾರಿಯನ್ನು ಉಕ್ಕುಡದ ಪತ್ತಿರ ಹಿಡಿದಿರುವುದಾಗಿ ಪಾಲಂಗಳೂರು ವಾರ್ತೆ ತಿಳಿಸುತ್ತದೆ.

★

ಗುತ್ತಿಗೆಗೆ ಕೊಟ್ಟಿದೆ

ಮೈಸೂರು ರೇಸ್ ಕೋರ್ಸ್‌ನ್ನು ಶ್ರೀ ಮನ್ಮಹಾರಾಜರವರು ಮೂವತ್ತು ವರ್ಷಗಳ ಅವಧಿಗೆ ಬೆಂಗಳೂರು ಟ್ರಫ್ ಕ್ಲಬ್‌ಗೆ ಗುತ್ತಿಗೆಗೆ ನೀಡಿದ್ದಾರೆಂದೂ ಗೊತ್ತಾಗಿಡೆ.

★

ಕೇಂದ್ರದ ನೆರವು

ಪಾನನಿಷೇಧ ಜಾರಿಗೆ ತರುವ ರಾಜ್ಯಗಳ ಬಗ್ಗೆ ಕೇಂದ್ರದ ನೆರವು ಮುಂದಿನ 5 ವರ್ಷಗಳಿಗೆ ರೂ. 315 ಕೋಟಿ ಎಂದು ನವದೆಹಲಿ ವಾರ್ತೆ ತಿಳಿಸುತ್ತದೆ.

ರಾಜರ ಸಭೆ

ರಾಜಧನ ಮುತ್ತಿತರ ರಾಜರಿಗೆ ಕೊಡಲಾಗಿರುವ ರಿಯಾಯಿತಿ ವಜಾ ಮಾಡಬೇಕೆಂಬ ಭಾರತ ಕಾಂಗ್ರೆಸಿನ ನಿರಾವಿನ ಬಗ್ಗೆ ಸರ್ಕಾರ ಮತ್ತೆ ಪರಿಶೀಲಿಸುವದೆಂಬ ನಂಬಿಕೆಯನ್ನು ಬರೋಡಾದಲ್ಲಿ ಸೇರಿದ್ದ ರಾಜರ ಸಭೆ ಆಶಿಸಿದೆ.

★

ದೇಶದಲ್ಲಿಯ ಸ್ರವಾಹ ಭೀಕರತೆ ಸ್ಥಿತಿ ಬಗ್ಗೆ ರಾಜ್ಯಸಭೆ ಸದಸ್ಯರುಗಳು ಕಳವಳ ಗೊಂಡಿರುವರು. ಪಶ್ಚಿಮ ಬಂಗಾಳ, ರಾಜಾಸ್ತಾನ, ಮುತ್ತಿತರ ಕಡೆಯಲ್ಲೂ ನೆರೆಹಾವಳಿ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಬೇಕೆಂದು ಕೋರಿದರು.

★

ಸೆಪ್ಟೆಂಬರ್ 11 ಮತ್ತು 12 ರಂದು ಸಾಂಕೇತಿಕ ಮುಷ್ಕರ ನಡೆಸಲು ದಕ್ಷಿಣ ರೈಲ್ವೆ ಮಜದೂರು ಸಂಘದ ಸದಸ್ಯರು ಬಹುಮತ ನೀಡಿದ್ದಾರೆಂದು ಮದರಾಸು ವಾರ್ತೆ ತಿಳಿಸುತ್ತದೆ.

★

ಬಿಹಾರಿನ ಡೆಹರಿ ಆನ್ ಸೋನ್ ನ ಪ್ರೌಢಶಾಲೆಯು ನಿವೃತ್ತ ಉಪಾಧ್ಯಾಯ ಹರಿಚರಣ ಗುಪ್ತರು ಒಂದು ವಾರದಿಂದ ಸಾಪತ್ತಿ ಆಗಿದ್ದಾರೆ. ಈ ಮಧ್ಯೆ ಊರಿಂದ ದಯೋ ಅವರ ಹೆಂಡತಿಗೆ ಬಂದಿದ್ದು ರೂ. 30 ಸಾವಿರವನ್ನು ಅವರು ತಿಳಿಸಿರುವ ಸ್ಥಳಕ್ಕೆ ತಂದುಕೊಟ್ಟರೆ ಅವರನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಲಾಗಿದೆ. ಪೊಲೀಸಿನವರಿಗೆ ದೂರು ಮತ್ತು ಕಾಗದ ಗಳನ್ನು ಕೊಡಲಾಗುವುದು.

★

ಅಮೆರಿಕ, ಯೂರೋಪ್ ಮತ್ತು ರಷ್ಯ ಪ್ರವಾಸ ಮುಗಿಸಿಕೊಂಡು ನೇ ್ರದಾನಿ ಡಾ|| ಎಂ. ಸಿ. ಮೋದಿಯವರು ಈ ತಿಂಗಳಿನ 3 ನೇ ವಾರ ಭಾರತಕ್ಕೆ ವಾಪಸಾಗುವರು.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಚಾಣಕ್ಯ ಸಮರ್ಥ ರಾಮದಾಸ್, ವಿದ್ಯಾರಣ್ಯ ಮುಂತಾದ ಮಹನೀಯರು ದೇಶಕ್ಕೆ ಒದಗಿಬಂದಿರುವ ಅಘಾತದ ನಿವಾರಣೆಗೆ ಪ್ರತಿಯೊಬ್ಬರೂ ತಮ್ಮ ಪಾ ಲಿ ನ ಕರ್ತವ್ಯ ಮಾಡುವಂತೆ ಪ್ರೇರಣೆ ನೀಡಿದರೇ ಹೊರತು, ವರ್ಣಾಶ್ರಮಕ್ಕೆ ಸಂಬಂಧಪ ಟ್ಟ ಆಚಾರಗಳನ್ನು ಬಿಡಬೇಕೆಂದು ಕರೆ ನೀಡಲಿಲ್ಲ. ಅವರುಗಳೂ ಆಚಾರ ಪಾಲನೆ ಮಾಡುತ್ತಿದ್ದರು ಹೊರತು, ದೇಶಸೇವೆಯ ವ್ಯಾಜಕ್ಕಾಗಿ ಆಚಾರ ಬಿಡಲಿಲ್ಲ. ಆದು ವರೆಗೂ ಹಿಂದೂ ಧರ್ಮದ ವರ್ಣಾಶ್ರಮ ವ್ಯವಸ್ಥೆಯಾಗಲೀ, ಆಚಾರಗಳಾಗಲೀ ದೇ ಶಕ್ಕೆ ದಾಸ್ಯ ತರಲಿಲ್ಲ. ಸ್ವಾರ್ಥಕ್ಕಾಗಿ ಶಾಸ್ತ್ರಗಳಿಗೆ ಅವಿಧೇಯರಾಗಿ, ಆಚಾರವನ್ನು ಬಿಟ್ಟ ಹಿಂದೂಗಳೇ ಪರಕೀಯರ ಸೇವೆಗೆ ನಿಂತು, ದೇಶದ ದೀರ್ಘ ಕಾಲದ ದಾಸ್ಯಕ್ಕೆ ಕಾರಣರಾದರು. ಇಂದಿಗೂ ಸಮಾಜಕ್ಕೆ ಉಂಟಾಗುತ್ತಿರುವ ತೊಂದರೆಗಳು ಆಚಾರ ಬಿಟ್ಟವರಿಂದಲೇ ಒದಗುತ್ತಿದೆ.

.... ಆಚಾರವನ್ನು ಬಿಡುವುದರಿಂದ ಆಗುವ ಪರಿಣಾಮ ....

ಈಚಿಗೆ ಪ್ರತಿ ಗ್ರಾಮದಲ್ಲೂ ಏಗಾಗ್ಗೆ ಬಂದು ಮತಪ್ರಚಾರ ಮಾಡುತ್ತಿರುವ ಕ್ರಿಶ್ಚಿಯನ್ನರನ್ನು ಕಾಣುತ್ತಿರುತ್ತೇವೆ. ಇವರಲ್ಲಿ ಬಹು ಮಂದಿ ಈ ದೇಶದ ಹಿಂದೂ ಗಳಾಗಿದ್ದು, ಯಾವುದೇ ಆಸೆಗೆ ಬಲಿಬಿದ್ದು ಪರಿವರ್ತನೆಯಾದವರೂ, ಕೆ ಲ ವ ರ್ ಇಂಗ್ಲೆಂಡ್, ಅಮೆರಿಕಾ ಮುಂತಾದ ದೂರದೇಶಗಳಿಂದ ಬಂದು ಮತಪ್ರಚಾರ ಮಾ ಡುವವರು. ಇವರುಗಳು ಯಾವ ಕಷ್ಟದ ಕೆಲಸವನ್ನಾದರೂ ಮಾಡಲು ಪ್ರಯತ್ನಿ ಸುತ್ತಾರೆ. ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ಹೆದರಿಸುವುದು ಮುಂತಾ ದ ಎಲ್ಲಾ ಕ್ರಮಗಳನ್ನೂ ಅನುಸರಿಸಿ ತಮ್ಮ ಜಾತಿಗೆ ಹಿಂದೂಗಳನ್ನು ಸೇ ರಿ ಸ ಲು ಪ್ರಯತ್ನಿಸುತ್ತಾರೆ.

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is wellknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಅಶೋಕ ಬಿಡಿನ್ ಶೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಬೆಂಗಳೂರು

ಎಲ್ಲ ವಿಧದ ಅಯಿಲ್‌ಕಲರ್‌ನ ಪೇಂಟಿಂಗ್‌ಗಳನ್ನು ಇಲ್ಲಿ ದೊರೆಯುತ್ತವೆ

ಪುಡ್‌ಲಾಂಡ್ಸ್ ಅಮೋಘ 6 ನೇ ವಾರ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ಡಿನ 3 ಪ್ರದರ್ಶನಗಳು]

ಆಪೆರ— ಜನವರಿಯ 5 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana,

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದಕ್ಷಿಣಾಮ್ನಾಯ ಜಗದ್ಗುರು ಮಹಾಸಂಸ್ಥಾನಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಮಿಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ಪಾಕ್ಷಿಕದಯೆ, ತಾಲೂಕಾಹಾರ, ಪಶುವೈದ್ಯ, ಸಮಾಚಾರಗಳ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದಾ 50 ನೈಸೆ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವಂಖ್ಯೆ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ॥ ಪಿ ಎಸ್ ಶಾಂತಕಯಿಣ್, ಶ್ರೀ ಟಿ.ಎಸ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜೆ. ಶಾಮ್ಯ ಗಳು, ೧೪೨೦ ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ ಹೊಂಗನೂರು

ಗೋರಕ್ಷಣಾ ಚಟುವಟಿಕೆಗಳಿಗೆ ಸಹಕಾರವಿತ್ತವರು ಚಾಮರಾಜಪುರಂ ಮೈಸೂರು ೪

ನಿರ್ವಾಹಕ — ಗೋರಕ್ಷಣಾ ಅಭಿಯಾನ 1967 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮುಖ್ಯ ಕರ್ತವ್ಯವೆಂದು ಅಭಿಮಾನಗಳು ಹೆಚ್ಚೆ ಚ್ಚಾಗಿ ಸಡೆಯಲಿ

Edited, Printed & Published by Dharmapracharo Nirata M S Krishna Rao (Proprietor) at the Satyavadi Press Chamarajapuram, Mysore 4